ಮೈಸೂರ ಗೆಜೆಟ್.

ಸಂ 44.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 8.

ಬೆಂಗಳೂರು, ಗುರುವಾರ, ಫೆಬ್ರವರಿ ತಾ॥ 25, ಸನ್ 1909.

II ನೆ ಭಾಗ

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗ್ಯೆರೆರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖೆ.

1908ನೆ ಇಸವಿ ಏಪ್ರೆಲ್ 24.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮೈಸೂರು ಡಿಸ್ಟ್ರಿಕ್ಟಿನಲ್ಲಿ ಈ ಕೆಳಗೆ ನಮೂದಿಸುವ ಸ್ಥಳದಲ್ಲಿ ಅದರ ಬಾಜೂದಲ್ಲಿ ಕಂಡ ತಾರೀಖುಗಳಲ್ಲಿ ಜಂಗಲ್ ಪನಾರೆ ಜಿನಸಿಗಳನ್ನು ಬಹಿರಂಗವಾದ ಹರಾಜು ಮೂಲಕ ನಿಕ್ಕಯಿಸಲ್ಪಡುತ್ತೆ :—

ನಂಬರು.	ಸ್ಥಳ.	ಹರಾಜು ತಾರೀಖು.	ಹರಾಜು ಮಾಡಿಸುವ ಆಫಿಸರವರ ಹೆಸರು.	ಪನಾರೆ ಜಿನಸು ವೊತ್ತ.	
				ಅವ್ವಲ್ ಅರಗು.	ಅಳಲೆಕಾಯಿ.
				ಮಣ. ಪ.	ಮಣ. ಪ.
1	ಶ್ರೀರಂಗಪಟ್ಣದ ಕೋಟಿ ...	13—3—1909	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು.	100 0	1,600 0

ಷರತ್ತು :—1887ನೆ ಇಸವಿ ಜೂನ್ 18ನೆ ಮಕ್ರುಂ ಮೈಸೂರು ಗೆಜೆಟ್ಟಿನ 287—288ನೆ ಪುಟಗಳಲ್ಲಿ ಇರುವ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ 87ನೆ ಇಸವಿ ಜೂನ್ 11ನೆ ಮಕ್ರುಂ ನೋಟಿಫಿಕೇಷನನ್ನು ನೋಡಿ.

ಇಸ್ತಿಹಾರ್ನಾಮಾ, ತಾರೀಖು 12ನೆ ಫೆಬ್ರವರಿ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಂಡ ಡಿಪೋಗಳಲ್ಲಿ ಚೌಬೀನಾವನ್ನು ಸದರಿ ಡಿಪೋಗಳಿ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂ.	ಡಿಪೋಗಳ ಹೆಸರು.	ಹರಾಜು ತಾರೀಖು.	ನಾಟುಗಳ ವಿವರ.	ಸಲೆ ಅಡಿ.		ಷರಾ.
				ನಂಬರ್.	ಅಡಿ.	
1	ಮೈಸೂರು ಉದ್ಯಾಡ್ರ್.	11—3—09	ಸಾಗ್ವಾನಿ ನಾಟು ...	800	25,000	—
			ಡಿಟೋ ಜಂತಿಗಳು ...	400	5,000	
			ಹೊನ್ನೆ ನಾಟು ...	150	4,000	
			ಡಿಟೋ ಜಂತಿಗಳು ...	20	1,000	
			ಮತ್ತಿ ನಾಟು	200	5,000	
			ಡಿಟೋ ಜಂತಿಗಳು ...	75	500	
			ಬೀಟೆ ನಾಟು ...	25	1,000	
			ಕಾಡು ನಾಟು ...	25	500	
2	ನಂಜನಗೂಡು ಡಿಪೋ	12—3—09	ಸಾಗುವಾನಿ ನಾಟು ...	100	3,000	ಜಿಲ್ಲೆ ಕಾಡು
			ಡಿಟೋ ಜಂತಿಗಳು ...	100	1,000	
			ಹೊನ್ನೆ ನಾಟು ...	100	2,000	
			ಡಿಟೋ ಜಂತಿಗಳು ...	100	500	
			ಮತ್ತಿ ನಾಟು ...	100	1,500	
			ಡಿಟೋ ಜಂತಿಗಳು ...	10	120	
			ಬೀಟೆ ನಾಟು ...	25	600	
			ಡಿಟೋ ಜಂತಿಗಳು ...	50	500	
			ಕಾಡು ನಾಟು ...	20	500	

ಹರಾಜು ಷರತ್ತುಗಳು.

1. ಜಡ ದರಖಾಸ್ತುದಾರನು ಹರಾಜು ಆದ 3 (ಮೂರು) ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಶೇಕಡ 25 ರಂತೆ ಆಗುವ ಮೊಬಲಗನ್ನು ಹತ್ತರವಿರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜು ಮಾಡಿ ಅದರಿಂದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.
2. ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಕಟ್ಟಿರುವ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮರಗಳನ್ನು 1ನೆ ಪ್ಯಾರದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.
3. ತಾನು ಹರಾಜಿನಲ್ಲಿ ಪಡದಿರುವ ಚವುಬೀನಾ ಕಿಮ್ಮತ್ತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಚವುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.
4. ಹರಾಜು ತಾರೀಖು ಲಾಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಬಂದಕ್ಕೆ ಶೇಕಡ ಬಂದಕ್ಕೆ 12 ರೂಪಾಯನ ಮೇರೆ ಡಿಪೋ ಭಾಡಾ ವಸೂಲು ಮಾಡಲಾಗುತ್ತೆ.

ಎಂ. ಜೆ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ನೋಟಿಫಿಕೇಷನ್, ತಾರೀಖು 12ನೆ ಫೆಬ್ರವರಿ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ನಮೂದಾಗುವ ತಪಶೀಲ್ ಮೇರಿಗೆ ಶಿವಮೊಗ್ಗಾ ಡಿಪೋದಲ್ಲಿರುವ ಚೌಬೀನೆಯನ್ನು ತಾರೀಖು 10ನೆ ಮಾರ್ಚಿ 1909ರಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದಲಾಗಲಿ ಅಥವಾ ಅವರಿಂದ ನೇಮಿಸಲ್ಪಟ್ಟ ಇತರ ಆಫಿಸರವರಿಂದಲಾಗಲಿ ಹರಾಜು ಮಾಡಿಸಲ್ಪಡುತ್ತೆ :—

(1) ಸಾಗುವಾನಿ ನಾಟ	... 300	(5) ಸಾಗುವಾನಿ ಬಿಲಗು	... 50
(2) ಇತರ ಮನ್ನಾ ಜಾತಿ ನಾಟ	... 300	(6) ಕಾಡುಜಾತಿ ಬಿಲಗು	... 100
(3) ಮತ್ತಿನಾಟ	... 200	(7) ಕಿರಿಬಿದರು	... 2,000
(4) ಇತರ ಕಾಡುಜಾತಿ ನಾಟ	... 300	(8) ಹೆಬ್ಬಿದರು	... 800

ಹರಾಜು ಷರತ್ತು :—ಸಮಾಪವಾದ ಖಜಾನೆಗೆ ಪ್ರತಿ ಲಾಟು ತೆಗದುಕೊಂಡ ಹರಾಜುದಾರನು ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆ ಹಣವನ್ನು ಹರಾಜು ತಾರೀಖು ಲಾಗಾಯಿತು 5 ದಿವಸಗಳೊಳಗೆ ಜಮೆ ಮಾಡಿಸಬೇಕು. ತಪ್ಪಿದಲ್ಲಿ 2ನೆ ಹರಾಜು ಮಾಡಿಸಿ ನಷ್ಟವಾದ ಮೊಬಲಗಿಗೆ ಅವಲ್ ಹರಾಜುದಾರನಿಗೆ ಗುರಿಪಡಿಸುತ್ತೆ. ಷುರು ಹರಾಜಿಗಿಂತ ಜಾಸ್ತಿ ಹಣ ಬಂದಲ್ಲಿ ಅಂಥಾ ಹಣಕ್ಕೆ ಅವಲ್ ಹರಾಜುದಾರನು ಅರ್ಹನಲ್ಲಾ.

(2) ಬಾಕೀ ಹಣವನ್ನು ಹರಾಜು ತಾರೀಖು ಲಾಗಾಯಿತ್ತು ಬಂದು ತಿಂಗಳೊಳಗೆ ಪಾವತಿ ಮಾಡಬೇಕು. ತಪ್ಪಿದಲ್ಲಿ ಷುರು ಕೊಟ್ಟ ಕಾಲು ಹಿಸ್ಸೆ ಹಣವನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುತ್ತೆ. ಅಲ್ಲದೆ ಮೇಲೆ ನಮೂದಿಸಿದಂತೆ ದುಸ್ತಾ ಹರಾಜು ಮಾಡಿಸುತ್ತೆ.

(3) ಪೂರಾ ಹಣ ಪಾವತಿ ಮಾಡಿ ಲೈಸೆನ್ಸು ಪಡದ ವಿನಹ ಯಾವ ಚೌಬೀನೆಯನ್ನಾಗಲಿ ರಫ್ತು ಮಾಡಿಕೊಳ್ಳಕೂಡದು.

(4) ಹರಾಜಾದ ಚೌಬೀನೆಯನ್ನು ಹರಾಜು ತಾರೀಖು ಲಾಗಾಯಿತು 90 ದಿವಸಗಳೊಳಗೆ ರಫ್ತು ಮಾಡದೆ ಬಿಟ್ಟಲ್ಲಿ ಹರಾಜುದಾರ್ರು ಡಿಪೋ ಬಾಡಿಗೆಯನ್ನ ಹರಾಜು ಮೊಬಲಗಿನಮೇಲೆ ಸಾಲಿಯಾನ ಶೇಕಡ 12 ರೂಪಾಯಿನಂತೆ ಹರಾಜು ತಾರೀಖು ಲಾಗಾಯಿತು ವಸೂಲ್ ಮಾಡಲ್ಪಡುತ್ತೆ.

ಎ. ಪೊನ್ನಸಾಮಿ ಮೊದಲಿಯಾರ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್.

ಸ್ ೧೯೦೯ನೆ ಇಸವಿ ಜನವರಿ 30 ರಲ್ಲು.

ಸ್ ೧೯೦೯ನೆ ಏಪ್ರಿಲ್ ಮಾಹೆ 2ನೆ ತಾರೀಖು ಲಾಗಾಯಿತು 3ನೆ ತಾರೀಖು ಶನಿವಾರಕ್ಕೆ ನಂಜನಗೂಡಿನಲ್ಲಿ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ರಥೋತ್ಸವ ನಡೆಯುವ ಕಾಲವಲ್ಲಿ, ಸದರೀ ಸ್ಥಳದಲ್ಲಿ ಬಂದು ದನಗಳ ಪ್ರದರ್ಶನ ನಡಿಯುತ್ತೆ.

II. ಪ್ರದರ್ಶನದಲ್ಲಿ ಉತ್ತಮ ದನಗಳಿಗೆ ಈ ಕೆಳಗೆ ಕಂಡಂತೆ ಬಹುಮಾನಗಳು ದೊರೆಯುತ್ತೆ.

A ಕ್ಲಾಸ್. ವ್ಯವಸಾಯದ ಎತ್ತುಗಳು.	1ನೆ ಬಹುಮಾನ	...	20	A ಕ್ಲಾಸ್. ಒಟ್ಟು ರೂಪಾಯಿ 55
	2ನೆ ,,	...	15	
	3ನೆ ,,	...	10	
	4ನೆ ,,	...	10	
B ಕ್ಲಾಸ್. ಬೀಜದ ಗೂಳಿಗಳು.	1ನೆ ಬಹುಮಾನ	...	15	B ಕ್ಲಾಸ್. ಒಟ್ಟು ರೂಪಾಯಿ 25
	2ನೆ ,,	...	10	
C ಕ್ಲಾಸ್. ಕರುಗಳು.	ಪ್ರತಿಯೊಂದಕ್ಕೂ 5 ರೂಪಾಯಿನಂತೆ ನಾಲ್ಕು ಬಹುಮಾನ.			C ಕ್ಲಾಸ್. ಒಟ್ಟು ರೂಪಾಯಿ 20
D ಕ್ಲಾಸ್. ಬಳ್ಳಿ ಕರುಗಳನ್ನು ಕೊಡುವ ಹಸು.	1ನೆ ಬಹುಮಾನ	...	10	D ಕ್ಲಾಸ್. ಒಟ್ಟು ರೂಪಾಯಿ 10

ಒಟ್ಟು ಜುಮ್ಲಾ ರೂ. 110

III. ಬಹುಮಾನವನ್ನು ಕೊಡಲು ಬಂದು ಕಮಿಟಿಯನ್ನು ನಿರ್ಪಡಿಸುತ್ತೆ. ಸದರೀ ಕಮಿಟಿಯು ತೀರ್ಮಾನವು ಅಖೈರಾಗಿರುತ್ತೆ. ಕಮಿಟಿಯವರ ತೀರ್ಮಾನಕ್ಕೆ ಕಾರಣ ಕೇಳಿಕೂಡದು.

IV. ಸ್ಥಳದಲ್ಲಿ ಹುಲ್ಲು ದೊರೆಯುಲು ಏರ್ಪಾಡು ಇಹುತ್ತೆ. ಆದರೆ ದನಗಳ ಸ್ವಂತಗಾರರೂ ತಮ್ಮ ಜಾಗರೂಕತೆಯಲ್ಲಿ ಇರುವದು ಅನುಕೂಲ.

V. ಪ್ರದರ್ಶನಕ್ಕೆ ದನಗಳನ್ನ ತರಲು ಇಷ್ಟವುಳ್ಳವರು ನಂಜನಗೂಡು ತಾಲ್ಲೂಕು ಆಮಿಲರವರಿಗೆ ಜಾತ್ರೆ ಮೊದಲಾಗುವದಕ್ಕೆ ಕೊನೇಪಕ್ಷ 2 ದಿವಸ ಮೊದಲಾಗಿ ಬರೆದುಕೊಳ್ಳಬೇಕು.

VI. ಪ್ರದರ್ಶನ ನಡೆಯುವ ಸ್ಥಳವು ದನಗಳು ಸೇರಲು ಅನುಕೂಲವಾದ್ದಾಗಿದೆ. ಮೈಸೂರು ಮತ್ತು ಬ್ರಿಟಿಷ್ ಕೀ ಮೆಯಿಂದ ಅನೇಕ ಜನಗಳು ಸೇರುವದ್ದರಿಂದ, ದನಗಳ ವ್ಯಾಪಾರ ಚನ್ನಾಗಿ ನಡೆಯಬಹುದು.

ಇಸ್ತಿಹಾರ್ನಾಮೆ.

ತಾರೀಖು 27ನೆ ಜನವರಿ 1909.

ಎಡತೊರೆ ತಾಲ್ಲೂಕು ಕಸಬಾ ಹೋಬಳಿಗೆ ಸೇರಿದ ಜೋಡಿ ಚಾಮಲಾಪುರ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿ ಗೋಸ್ಕರವಾಗಿ ಸದರಿ ಜೋಡಿ ಚಾಮಲಾಪುರ ಗ್ರಾಮದಲ್ಲಿ 1909ನೆ ಏಪ್ರಿಲ್ ಮಾಹೆ 12ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ. ಮೇಲ್ಕಂಡ ತಾರೀಖಿನಲ್ಲಿ ಹರಾಜು ಅಷ್ಟರ್ಥ ಆದಲ್ಲಿ ಮರನೇ ದಿವಸ ಎಡತೊರೆ ತಾಲ್ಲೂಕು ಕಛೇರಿಯಲ್ಲಿ ಹರಾಜು ನಡಿಸಲ್ಪಡುತ್ತೆ.

ಹೆಚ್ಚಿನ ತಪ್ಸೀಲಿಗೆ ಸ್ 190 ನೆ ಇಸವಿ ಫೆಬ್ರವರಿ 11ನೆ ಮಂಗಳವಾರ ಮೈಸೂರು ಗೆಜೆಟ್ಟಿನ 2ನೆ ಭಾಗದ 81ನೆ ಪೇಜು ನೋಡತಕ್ಕದ್ದು.